ವಸತಿ ರಹಿತರ ಸಮೀಕ್ಷೆ

2458(1027); ಡಾ॥ ರಫೀಕ್ ಅಹ್ಮದ್ ಎಸ್.

ಅ) ತುಮಕೂರು ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಸತಿ ರಹಿತರ ಮತ್ತು ನಿವೇಶನ ರಹಿತರ ಹಾಗೂ ಬಾಡಿಗೆದಾರರ ಸಮೀಕ್ಷಾ ಕಾರ್ಯಗಳನ್ನು ನಡೆಸಲಾಗಿದೆಯೇ (ವಿವರ ನೀಡುವುದು)?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) 2003ರಲ್ಲಿ ರಾಜ್ಯದಾದ್ಯಂತ ವಸತಿ ರಹಿತರು ಮತ್ತು ನಿವೇಶನ ರಹಿತರ ಸಮೀಕ್ಷೆಯನ್ನು ನಡೆಸಲಾಗಿದ್ದು, ತುಮಕೂರು ನಗರದಲ್ಲಿ 330 ವಸತಿ ರಹಿತರು 730 ನಿವೇಶನ ರಹಿತರನ್ನು ಗುರುತಿಸಲಾಗಿರುತ್ತದೆ. ಆದರೆ ಬಾಡಿಗೆದಾರರ ಸಮೀಕ್ಷೆಯನ್ನು ನಡೆಸಿರುವುದಿಲ್ಲ.

ಅಂಗವಿಕಲರ ಪಿಂಚಣಿ ಬಗ್ಗೆ

2459(1029); ಡಾ॥ ರಫೀಕ್ ಅಹ್ಮದ್ ಎಸ್.

ಅ) ರಾಜ್ಯದಲ್ಲಿ ಅಂಗವಿಕಲ ಪಿಂಚಣಿ ಪಡೆಯುತ್ತಿರುವ ಪಿಂಚಣಿದಾರರೆಷ್ಟು (ಜಿಲ್ಲಾವಾರು ವಿವರ ಒದಗಿಸುವುದು)

ಆ) ಸದರಿ ಪಿಂಚಣಿಯನ್ನು ಒಬ್ಬರಿಗೆ ಪಾವತಿಸುವ ಮೊತ್ತವೆಷ್ಟು; ಇವರ ಪಿಂಚಣಿ ಪಾವತಿಗೆ ತಗಲುವ ವಾರ್ಷಿಕ ಮೊತ್ತವೆಷ್ಟು?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 799191 ವಿಕಲಚೇತನರು ಮಾಶಾಸನ ಪಡೆಯುತ್ತಿರುತ್ತಾರೆ. ವಿಕಲಚೇತನರ ಜಿಲ್ಲಾವಾರು ಮಾಹಿತಿಯನ್ನು 'ಅನುಬಂಧ–1' ರಲ್ಲಿ ನೀಡಲಾಗಿದೆ.